ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 15.07.2023.

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಪಿ. ಸಿ. ಎಸ್. ವಕೀಲರಿಂದ.**

1) ಸರ್ವೆ ನಂಬರ 74 ಇದು ಯಾವಾಗ ಪೋಟ ಹಿಸ್ಸೆಗಳು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸರ್ವೆ ನಂಬರ 74 ಇದರ ಒಟ್ಟು ವಿಸ್ತೀರ್ಣ 13 ಎಕರೆ 19 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ ಜಮೀನು ಚೆನ್ನಬಸಪ್ಪ ಶಿವಪ್ಪ ಎಲಿ, ಬಸವಣ್ಣೆಪ್ಪ ನಾಗಪ್ಪ ಎಲಿ, ಬಸವಣ್ಣೆಪ್ಪ ಶಿವರುದ್ರಪ್ಪ ಎಲಿ, ಕಲ್ಲಪ್ಪ ಶಿವರುದ್ರಪ್ಪ ಎಲಿ ಇವರ ಸಾಮೂಹಿಕ ಮಾಲ್ಕಿ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ಅರಳಿಮರದ ಜಮೀನು ಎಂದು ಕರೆಯುತ್ತಿದ್ದರು ಎಂದರೆ ಸರಿ. ಸದರಿ ಜಮೀನು ಮೇಲಿನ ನಾಲ್ಕು ಜನರು 1947 ರಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2) ದೊಡ್ಡ ಜಮಾಲಸಾಬ ಬುಡನಸಾಬ ಹಿತ್ತಲಮನಿ ಇವರು ನನ್ನ ತಂದೆಯ ತಂದೆಯಾಗಬೇಕು. ದೊಡ್ಡ ಜಮಾಲಸಾಬ ಬುಡನಸಾಬ ಹಿತ್ತಲಮನಿ ಇವರು 06.07.1961 ರಂದು ಸರ್ವೆ 74/2 ರಲ್ಲಿ 7 ಎಕರೆ ಖರೀದಿ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ 74/3 ರಲ್ಲಿ 1 ಎಕರೆ 19 ಗುಂಟೆ ಖರೀದಿ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ನಮ್ಮ ಘರಾಣೆಗೆ ಹೇಗೆ ಬಂದಿರುತ್ತದೆ ಎಂದು ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ.

3) ಇಮಾಮಸಾಬ ಇವರು ದೊಡ್ಡಪ್ಪ , ಫಕ್ರುಸಾಬ ಇವರು ನನ್ನ ತಂದೆ, ಮರ್ದಾನಸಾಬ ಇವರು ನನ್ನ ಚಿಕ್ಕಪ್ಪನಾಗಬೇಕು. ಸದರಿಯವರಿಗೆ ಸರ್ವೆ ನಂಬರ 74/1 ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.ಕಲ್ಲಪ್ಪ ಶಿವರುದ್ರಪ್ಪ ಎಲಿ ಮತ್ತು ಇವರ ಮಗ ವಿಶ್ವನಾಥ ಕಲ್ಲಪ್ಪ ಎಲಿ ಇವರಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ನನ್ನ ಗಂಡನಿಗೆ ಯಾವ ನಾತೆಯಿಂದ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ನನಗೆ ನನ್ನ ತಂದೆ ತಾಯಿ ಪೋತಿಯಾದ ಮೇಲೆ ಬಂದಿರುತ್ತದೆ.

4) ಸರ್ವೆ ನಂಬರ 74/2 ಮತ್ತು 74/3 ಇದು ದೊಡ್ಡ ಜಮಾಲಸಾಬ ಬುಡನಸಾಬ ಹಿತ್ತಲಮನಿ ಇವರ ಮರಣಾನಂತರ ಆತನ ಮಕ್ಕಳಿಗೆ ವಾರಸಾ ನಾತೆಯಿಂದ ಬಂದಿರುತ್ತದೆ ಎಂದರೆ ಸರಿ. ನಂತರ ಸದರಿಯವರು 1980 ರಲ್ಲಿ ಘರಾಣೆದ ಆಸ್ತಿಗಳನ್ನು ಪಾಲು ವಾಟಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಟ್ನಿಯಲ್ಲಿ 74/1 ಇದು ಇಮಾಮಸಾಬನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ನಂತರ 74/2+3 ಇದು 8 ಎಕರೆ 17 ಗಂಟೆಗೆ ಜಮೀನು ಫಕ್ರುಸಾಬ ಇವನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆ 12 ವರ್ಷಗಳ ಹಿಂದೆ ಪೋತಿಯಾಗಿರುತ್ತಾರೆ.

5) ಹಮೀದಾಬಿ ಮತ್ತು ಚಮನಬೀ ಮತ್ತು ಮದರಬಿ ಇವರು ನನ್ನ ಸಹೋದರಿಯರು . ಶರೀಫಾಬಿ ಅಂದರೆ ನಾನು. ನನ್ನ ತಂದೆ ಮರಣಾನಂತರ ಮೇಲೆ ಹೇಳಿದ ನಾಲ್ಕು ಜನರ ಹೆಸರು ಸರ್ವೆ ನಂಃ 74/2+3 ಕ್ಕೆ ವಾರಸಾ ನಾತೆಯಿಂದ ದಾಖಲು ಆಗಿರುತ್ತದೆ ಎಂದರೆ ಸರಿ. 2014 ರಲ್ಲಿ ನೊಂದಾಯಿತ ವಾಟ್ನಿ ಪತ್ರದ ಪ್ರಕಾರ ವಾಟ್ನಿ ಮಾಡಿಕೊಂಡಿರುತ್ತೇವೆ.. ಸದ ವಾಟ್ನಿ ಪತ್ರವನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ವಾಟ್ನಿ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ವಾಟ್ನಿ ಪತ್ರದಲ್ಲಿ ದಾರಿ ಕಾಣಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ . ನಾವು ವಾಟ್ನಿ ಆದ ಮೇಲೆ ನಮ್ಮ ಸ್ವಂತ ಒಕ್ಕಲುತನ ಇರದೇ ಇರುವುದರಿಂದ ಬೇರೆಯವರ ಮುಖಾಂತರ ಕೋರ ಅಥವಾ ಲವಾಣಿ ಕೊಟ್ಟು ಮಾಡಿಸುತ್ತೇವೆ ಎಂದರೆ ಸರಿ. ಈಗಲೂ ಸಹ ನಮ್ಮ ಜಮೀನನ್ನು ಬಾಬು ಕಾಟೇನಹಳ್ಳಿ ಎನ್ನುವವರು ಕೋರ ಲವಾಣಿ ಪ್ರಕಾರ ಮಾಡುತ್ತಾರೆ ಎಂದರೆ ಸರಿ.

6) ನನ್ನ ದೊಡ್ಡಪ್ಪ ಇಮಾಮಸಾಬ ಇವರು ಯಾವಾಗ ಪೋತಿಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿಯವರು 4 ನೇ ಪ್ರತಿವಾದಿ ಮತ್ತು ಆತನ ಅಣ್ಣ ಅಣ್ಣಪ್ಪ ಎಲಿ ಇವರಿಗೆ ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದ ಪತ್ರ ಸಲ್ಲಿಸಲು ಮತ್ತು ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ.

7) ನನ್ನ ದೊಡ್ಡಪ್ಪ ಇಮಾಮಸಾಬ ಇವರು 1998 ರಲ್ಲಿ ರಿ. ಸ. ನಂಃ 74/1 ಇದನ್ನು 1 ನೇ ಪ್ರತಿವಾದಿಯ ಗಂಡ , 2 ಮತ್ತು 3 ನೇ ಪ್ರತಿವಾದಿಯ ತಂದೆ ಹಾಗು 4 ನೇ ಪ್ರತಿವಾದಿಯವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಯಾವುದೇ ದಾಖಲೆಯನ್ನು ಪರಿಶೀಲನೆ ಮಾಡಿರುವುದಿಲ್ಲ. ನನ್ನ ಗಂಡ ಹಾಗೂ ಆತನ ಅಣ್ಣ ಇಮಾಮಸಾಬನ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದ ಯಾವುದಾದರೂ ಕಾಗದ ಪತ್ರ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-31 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ-31 ನ್ನು ಯಾವ ಕಾರಣಕ್ಕಾಗಿ ಮತ್ತು ಯಾರಿಗೆ ಸಲ್ಲಿಸಿದರು ಎಂದು ನನಗೆ ಗೊತ್ತಿರುವುದಿಲ್ಲ.

8) ನನ್ನ ದೊಡ್ಡಪ್ಪ ಇಮಾಮಸಾಬ ಇವರನ್ನು ನಾನು ನೋಡಿದ್ದೇನೆ . ಆತನು ಶಾಲೆ ಕಲಿತಿದ್ದ ಎಂದರೆ ಸರಿ. ಸದರಿಯವರು ಕನ್ನಡದಲ್ಲಿ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-31 ಯಾವ ವರ್ಷದ ದಾಖಲೆ ನನಗೆ ಗೊತ್ತಿಲ್ಲ. ದಾವಾ ರಸ್ತೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಸಕ್ಷಮ ಪ್ರಾಧಿಕಾರದಿಂದ ಯಾವುದೇ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ದಾವಾ ರಸ್ತೆಯಿಂದ ಇದೆ ಎಂದು ಸರ್ವೆ ಇಲಾಖೆಯಿಂದ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯರ ಉತ್ತರದ ಬಾಜು ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ಸದರಿ ದಾರಿ ಇದ್ದರೆ ನಮ್ಮ ದೊಡ್ಡಪ್ಪ ಖರೀದಿ ಕೊಡುವ ಸಮಯದಲ್ಲಿ ದಾರಿ ಕಾಣಿಸುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ದೊಡ್ಡಪ್ಪ ಖರೀದಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ.

9) ನಮ್ಮ ದೊಡ್ಡಪ್ಪನಿಗೆ ಖರೀದಿ ಪತ್ರದದಲ್ಲಿ ದಾರಿ ಕಾಣಿಸಲು ನಮ್ಮ ತಂದೆಗೆ ಹೇಳಿದ್ದರು.. ನಿಪಿ-12 ರಲ್ಲಿ ದಾರಿ ಇದೆ ಅಥವಾ ಇಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾವು ನಮ್ಮ ದೊಡ್ಡಪ್ಪ ಮತತ ಅಜ್ಜನ ಜೀವಿತಾವಧಿಯಿಂದಲೂ ದಾರಿ ಇದ್ದ ಆಧರಿಸಿ ದಾವೆ ಸಲ್ಲಿಸಿರುತ್ತೇನೆ. ದಾವಾ ರಸ್ತೆ ಎಂದು ಅಸ್ತಿತ್ವದಲ್ಲಿ ಇರದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.